# ‘ಅಮ್ಮು’ ತಂದ ಮಿಂಚು

■ ಚಂದನ ಜಿ.ಪಿ., ಹೊನ್ನಾಳಿ

ಚಂದ್ರನ ಕಥೆಯ ಹೇಳಿದಳಮ್ಮ
ಕಥೆಯನು ಕೇಳುತ ಪಾಚಿದ ಅಮ್ಮು
ಸುಂದರ ಚಂದ್ರನ ಮೇಲೆ ನೋಡಿ
ಹಿಡಿಯಲು ತವಕಿಸಿ ಕೈ ಚಾಚಿದನು
ಎಗರಿದನು, ದೊಪ್ಪೆಂದು ಬಿದ್ದನು
ಬಿಡದೆ ಮತ್ತೆ ಹಾರಿದನು

ಒಮ್ಮೆಲೆ ಚಂದ್ರನ ಹಿಡಿದಂತಾಗಿ
ಪಿಳಿ ಪಿಳಿ ಕಣ್ಣನು ಬಿಟ್ಟನು ಅಮ್ಮು
ಕೈಯಲೆಲ್ಲಾ ಮಿಂಚೆ ಮಿಂಚು
ಬೆಳ್ಳಿ ಬೆಳಕಿನ ಚಂದ್ರನ ಮಿಂಚು
ಸರ ಸರ ಜೇಬಲಿ ತುರುಕಿದನು
ಜೇಬಲೂ ಹೊಳೆವ ಬೆಳಕಿನ ಮಿಂಚು
ಅಚ್ಚರಿಯಿಂದ ಕರೆದನು ಅಮ್ಮು

ಚಿನ್ನೂ ಪುಟ್ಟಿ ಮೇರಿ ಮುನ್ನ
ಬನ್ನಿರಿ ಎಲ್ಲರೂ ನನ್ನಯ ಸಂಗಡ
ಹಾರುತ ಬೀಳುತ ಚಂದ್ರನ ಮಿಂಚನು
ಹಿಡಿದು ಕೊಟ್ಟನು ಗೆಳೆಯರಿಗೆ
ಚಿನ್ನು ಮುನ್ನಾರ ಜೇಬಲು ಮಿಂಚು
ಪುಟ್ಟಿಯು ಮೇರಿಗೆ ಬಳಿದಳು ಮಿಂಚು

ಎಲ್ಲರೂ ಮಿಂಚಿನ ಹೋಳಿಯನಾಡಿ
ಮೈ ಕೈ ಎಲ್ಲಾ ಬೆಳಕಲಿ ಮಿಂಚಿ
ಎಳೆಯರು ಆಡುತಾ ಖುಷಿಯನು ಹಂಚಿ
ಬೆಳಗಾಯಿತು ಏಳೂ ಎನಲು ಅಮ್ಮ
ಚಂದ್ರನ ಮಿಂಚೆಲ್ಲಿ ಹೋಯಿತು ಅಮ್ಮ
ಪೆಚ್ಚುತಾ ಜೇಬಲಿ ಹುಡುಕಾಡಿದ ಅಮ್ಮು


ಚಿತ್ರ: ವಿಜಯಕುಮಾರಿ

# ಕಂದಗೆ ಸವಿ ಸೊಲ್ಲ

■ ಸುಲೋಚನಾ ಜಿ. ಹೆಗಡೆ. ಹರಿಕೇರಿ



ಬಾನಲಿ ಮೂಡಿಹ ಚಂದ್ರನ ನೋಡುತ
ಕಂದನುಅಳುವನು ನಿಲಿಸುವನು
ಮಜ್ಜಿಗೆಯೊಳಗಣ ಬೆಣ್ಣೆಯ
ತೆರದಿ ಬಾನಲಿ ಚಂದ್ರಮ ತೋರುವನು

ನನಗೂ ಬೆಣ್ಣೆ ಬೇಕಮ್ಮಾ
ಚಂದ್ರನ ನನಗೆ ಕೊಡಿಸಮ್ಮಾ
ಎನ್ನುವ ಬಾಲಗೆ ಮಾತೆಯ
ಸಾಂತ್ವನ ಇಂತಿಹುದು

ಪುಟ್ಟಾ ನಿನ್ನ ಕರಗಳಿಗೆ
ಮಣ್ಣು ಮೆತ್ತಿದೆಯಲ್ಲಪ್ಪಾ
ಕಂದನೆ ನೀ ತೊಳೆ ಕೈ ಕಾಲು
ಬೇಗನೆ ಕೊಡುವೆನು ಹಣ್ಣು ಹಾಲು

ಹಣ್ಣನು ತಿಂದು ಹಾಲನು ಕುಡಿದು
ಗೆಳೆಯರ ಸಂಗಡ ನೀನಾಡು
ಅಡಲು ಬರುವ ಚಂದ್ರನ ಕೂಡ
ಬೇಗದಿ ನೀನು ಜೊತೆಗೂಡು

ಮಗುವಿನ ಹರುಷಕೆ ಮೇರೆಯೇ ಇಲ್ಲಾ
ಮಾತೆಯ ಮಾತೆ ಸವಿ ಬೆಲ್ಲ
ಸಖರೊಡನಾಡುವ ಕನಸನು ಕಾಣುತ
ನಿದ್ದೆಗೆ ಜಾರಿದ ಕಂದಗೆ ಹೇಳುತಲಿದ್ದಳು ಸವಿ ಸೊಲ್ಲ

ಚಿತ್ರ: ವಿಜಯಕುಮಾರಿ